# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.32-2011** **ಡಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ನಂಜಯ್ಯ<br>ನಂಜೇಪುರ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ** 02-08-2024. |

**<u>ಮುಂದುವರೆದ ಪಾಟೀ ಸವಾಲುಃ ವಾದಿಗಳ ಪರ ಶ್ರೀ ಕೆ.ಟಿ.ಆರ್  ವಕೀಲರಿಂದಃ</u>**

5. ದಾವಾ ಸರ್ವೆ ನಂ.139 ರ ವಿಸ್ತೀರ್ಣ 4 ಎಕರೆ 4 ಗುಂಟೆ ಸ್ವತ್ತನ್ನು ವಾದಿ ಮತ್ತು ಪ್ರತಿವಾದಿ ಇಬ್ಬರು ಸೇರಿ ಮರಿಸ್ವಾಮಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ವಾದಿ ಮತ್ತು ಪ್ರತಿವಾದಿಯವರು ಮರಿಸ್ವಾಮಪ್ಪ ನವರಿಗೆ ಕ್ರಯ ಮಾಡಿದ ಸಂಬಂಧ ಪ್ರಕರಣ ನಡೆದು ಸದರಿ ಸ್ವತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಸೇರಿದ ಸ್ವತ್ತಾಗಿದ್ದರಿಂದ ನಮ್ಮ ಕುಟುಂಬದವರಿಗೆ ವಾಪಸ್ಸು ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಭಾಗ ಆದ ನಂತರ ವಾಪಸ್ಸು ಬಂದಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆ ಮತ್ತು ವಾದಿ ಸೇರಿ ಮರಿಸ್ವಾಮಪ್ಪ ನವರಿಗೆ ದಾವಾ ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಿದ್ದರು ಎಂದರೆ ಸರಿ.

6. ನಾನು ಹಾಜರುಪಡಿಸಿರುವ ನಿಡಿ-10 ವಿಭಾಗ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ವಿಭಾಗ ಪತ್ರದಲ್ಲಿ ವಾದಿ ಮತ್ತು ಪ್ರತಿವಾದಿಗಳು ಸೇರಿ ದಾವಾ  ಷೆಡ್ಯೂಲ್ ಸ್ವತ್ತನ್ನು ಕಟ್ಟೆ ಹುಣಸೂರಿನ ಮರಿಸ್ವಾಮಪ್ಪ ರವರಿಗೆ ಮಾರಾಟ ಮಾಡಿರುವ ಕುರಿತು ಒಕ್ಕಣೆ ಇರುತ್ತದೆ ಎಂದರೆ ಸರಿ. ನಿಡಿ-10 ಕ್ಕೆ ವಾದಿಯವರ ಪತ್ನಿಯಾದ ಮಹದೇವಮ್ಮ ರವರು ಸಹಿ ಮಾಡಿರುವುದಿಲ್ಲ. ನಿಡಿ-10 ರಲ್ಲಿ 'ಈ

ಕರಾರಿಗೆ ಚಿಕ್ಕಗಂಡಯ್ಯನ ಹೆಂಡತಿ ಮಹದೇವಮ್ಮ ನವರ ಸಾಕ್ಷಿ ಸಹ ಹಾಕಿಸಿರುತ್ತೇನೆ' ಎಂದು ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪಂಚಾಯ್ತಿದಾರರು ಹೆಣ್ಣು ಮಕ್ಕಳನ್ನು ಕರೆಸಿ ಸಾಕ್ಷಿ ಹಾಕಿಸುವುದು ಬೇಡ ಎಂದು ಹೇಳಿದ್ದರಿಂದ ಮಹದೇವಮ್ಮ ರವರನ್ನು ಕರೆಸಿರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ–10 ಅನ್ನು ಬರೆದಾಗ ಮಹದೇವಮ್ಮ ರವರ ಇರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಇದ್ದರು ಎಂದು ನುಡಿಯುತ್ತಾರೆ. ನಿಡಿ–10 ರಲ್ಲಿ ಪಂಚಾಯ್ತಿದಾರರು ಹೆಣ್ಣು ಮಕ್ಕಳನ್ನು ಪಂಚಾಯ್ತಿಗೆ ಕರೆಸುವುದು ಬೇಡ ಎಂದು ಹೇಳಿದರು ಎಂಬ ವಿಚಾರವನ್ನು ನಿಡಿ–10 ರಲ್ಲಿ ನಮೂದಿಸಿರುವುದಿಲ್ಲ. ನಿಡಿ–10 ಅನ್ನು ಬರೆದ ಸಮಯ ಯಾರು–ಯಾರು ಇದ್ದರು ಎಂಬ ವಿಚಾರ ನನಗೆ ಗೊತ್ತು. ನಿಡಿ–10 ಅನ್ನು ಬರೆದ ಸಮಯ ಶಿವಲಿಂಗಪ್ಪ, ಮಹದೇವಪ್ಪ, ಮಹದೇವಯ್ಯ, ಶುಂಭುಲಿಂಗಪ್ಪ ರವರು ಇದ್ದರು. ಅವರನ್ನು ಹೊರತುಪಡಿಸಿ ನನ್ನ ತಂದೆ ಮತ್ತು ವಾದಿಯವರ ಇದ್ದರು. ಅವರನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ನಿಡಿ–10 ವಿಭಾಗ ಪತ್ರಕ್ಕೆ ಚಿಕ್ಕಗಂಡಯ್ಯ ರವರು ಸಹಿ ಮಾಡದೇ ಇದ್ದರೂ ಹಾಗೂ ಅದರಲ್ಲಿ ಬರೆದಿರುವ ವಿಚಾರ ಅವರಿಗೆ ತಿಳಿಯದೇ ಇದ್ದರೂ ಸಹ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ವಾದಿಯವರಿಗೆ ಭಾಗ ಕೊಡುವುದನ್ನು ತಪ್ಪಿಸುವ ಉದ್ದೇಶದಿಂದ ಹಾಗೂ ಈ ದಾವೆಗೋಸ್ಕರ ನಿಡಿ–10 ಅನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ವಾದಿಯವರಿಗೂ ಅರ್ಧ ಭಾಗಾಂಶದ ಹಕ್ಕು ಇದ್ದರೂ ಸಹ ಅವರ ಭಾಗಕ್ಕೆ ಸೇರಿದ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ಮರಿಸ್ವಾಮಪ್ಪ ನವರಿಗೆ ನನ್ನ ತಂದೆ ಮತ್ತು ವಾದಿಯವರು ಕ್ರಯ ಪತ್ರವನ್ನು ಮಾಡಿಕೊಟ್ಟಿರುವುದಕ್ಕೆ ಸಂಬಂಧಿಸಿದಂತೆ ಪ್ರಕರಣ ನಡೆದು ನಿಡಿ–10 ಅನ್ನು ಬರೆದುಕೊಟ್ಟ ಸುಮಾರು 10 ವರ್ಷಗಳ ನಂತರ ಮರು ಮಂಜೂರಾತಿ ಆಗಿರುತ್ತದೆ ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತನ್ನು ವಿಭಾಗ ಮಾಡಿಕೊಟ್ಟ ಪಕ್ಷದಲ್ಲಿ ವಾದಿಯವರಿಗೆ ಅವರಿಗೆ ಸಲ್ಲಬೇಕಾದ ಸ್ವತ್ತು ಅವರಿಗೆ ಸಲ್ಲುತ್ತದೆ ಎಂದರೆ ಸರಿಯಲ್ಲ.

ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಮರಿಸ್ವಾಮಪ್ಪ ರವರಿಗೆ ಮಾಡಿಕೊಟ್ಟ ಕ್ರಯ ಪತ್ರಕ್ಕೆ ಸಂಬಂಧಪಟ್ಟಂತೆ ಪ್ರಕರಣ ಇನ್ನೂ ಚಾಲ್ತಿಯಲ್ಲಿ ಇದ್ದ ಕಾರಣ ನಿಡಿ-10 ರಂತೆ ವಿಭಾಗ ಪತ್ರ ಮಾಡಿಕೊಳ್ಳುವಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ಪ್ರಕರಣದ ಖರ್ಚನ್ನು ನನ್ನ ತಂದೆಯವರೇ ವಹಿಸಿಕೊಳ್ಳುವಂತೆ ಹೇಳಿ ಬೇರೆ ಸ್ವತ್ತಿನಲ್ಲಿ ವಿಭಾಗವನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತು ಪುನಃ 2001 ನೇ ಸಾಲಿನಲ್ಲಿ ನಮ್ಮ ಕುಟುಂಬಕ್ಕೆ ಮರು ಮಂಜೂರಾತಿ ಆಗಿರುವುದರಿಂದ 1992 ರಲ್ಲಿ ನಿಡಿ-10 ರ ಪ್ರಕಾರ ಮಾಡಿಕೊಂಡ ವಿಭಾಗ ಪತ್ರವು ಶೂನ್ಯವಾಗಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**